# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಹನುಮಂತಪ್ಪ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೆಟಗೇರಿ ಗ್ರಾಮ ಪಂಚಾಯಿತಿ, ಕೊಪ್ಪಳ ತಾಲ್ಲೂಕು, ಕೊಪ್ಪಳ ಜಿಲ್ಲೆ, ಹಾಗೂ ಶ್ರೀ ಓಂಕಾರ ಮೂರ್ತಿ, ಜೂನಿಯರ್ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಕೊಪ್ಪಳ ತಾಲ್ಲೂಕು, ಕೊಪ್ಪಳ ಜಿಲ್ಲೆ, ಇವರ ವಿರುದ್ಧ ನಡೆಸಲಾದ ಇಲಾಖಾ ವಿಚಾರಣೆ–ಅಂತಿಮ ಆದೇಶ ಹೊರಡಿಸುವ ಬಗ್ಗೆ–ಆದೇಶ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/151/ಗ್ರಾಪಂಕಾ/2016 ದಿನಾಂಕ:31.03.2016.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ: UPLOK-1/DE/99/2016/ARE-7 Dt:21.04.2017.
3. ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ; UPLOK-1/DE/99/2016/ARE-7 Dt:24.04.2017.
4. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ/397/ಗ್ರಾಪಂಕಾ/2017 ದಿನಾಂಕ:12.05.2017.
5. ಶ್ರೀ ಹನುಮಂತಪ್ಪ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಇವರು ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿ:29.05.2017.
6. ಶ್ರೀ ಓಂಕಾರ ಮೂರ್ತಿ, ಜೂನಿಯರ್ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಇವರು ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿ:28.06.2017.

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಲ್ಲಿ ಸರ್ಕಾರದ ಆದೇಶದಲ್ಲಿ ಶ್ರೀ ಹನುಮಂತಪ್ಪ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೆಟಗೇರಿ ಗ್ರಾಮ ಪಂಚಾಯಿತಿ, ಕೊಪ್ಪಳ ತಾಲ್ಲೂಕು, ಕೊಪ್ಪಳ ಜಿಲ್ಲೆ, ಹಾಗೂ ಶ್ರೀ ಓಂಕಾರ ಮೂರ್ತಿ, ಜೂನಿಯರ್ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಕೊಪ್ಪಳ ತಾಲ್ಲೂಕು, ಕೊಪ್ಪಳ ಜಿಲ್ಲೆ, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 14–ಎ ಅಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ನಿಬಂಧಕರು ವಿಚಾರಣೆಗಳು–7, ಕರ್ನಾಟಕ ಲೋಕಾಯುಕ್ತ ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 11ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

**"ದೋಷಾರೋಪಣೆ"**

" ನೀವು –1 ಮತ್ತು 2ನೇ ಆ.ಸ.ನೌಕರರಾದ (1) ಶ್ರೀ ಹನುಮಂತಪ್ಪ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೆಟಗೇರಿ ಗ್ರಾಮ ಪಂಚಾಯಿತಿ, ಕೊಪ್ಪಳ ತಾಲ್ಲೂಕು, ಕೊಪ್ಪಳ ಜಿಲ್ಲೆ ಹಾಗೂ ಶ್ರೀ ಓಂಕಾರ ಮೂರ್ತಿ, ಜೂನಿಯರ್ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ ಕೊಪ್ಪಳ, ಉಪವಿಭಾಗ ಕೊಪ್ಪಳ, ರವರುಗಳು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ:

(ಅ) ಅಂದಾಜು ಪಟ್ಟಿಯಲ್ಲಿ ಹೇಳಲಾದ ಗೋಡೆಯ ಉದ್ದವನ್ನು ಪರಿಗಣಿಸಿರುವುದಿಲ್ಲ.

(ಆ) ಅಂದಾಜು ಪಟ್ಟಿಯಲ್ಲಿ ಹೇಳಿದಂತೆ ಕಾಮಗಾರಿಯಾಗಿರುವುದಿಲ್ಲ.

(ಇ) ಆರ್.ಸಿ.ಸಿ. ಪಿಲ್ಲರ್‌ಗಳನ್ನು ನಿರ್ಮಿಸಿದ್ದು, ಅದಕ್ಕಾಗಿ ಲಿಖಿತ ಅನುಮತಿ ಇಲ್ಲದೆ ಅಂದಾಜು ಪಟ್ಟಿಯಲ್ಲಿ ಇಲ್ಲದ ಕೆಲಸ ಮಾಡಿದ್ದು ಕಂಡುಬರುತ್ತದೆ.

(ಈ) 2012-13ನೇ ಸಾಲಿನಲ್ಲಿ ಕಟ್ಟಿದ ತಡೆಗೋಡೆ 2013-14ರ ಮಳೆಯ ಪರಿಣಾಮದಿಂದ ಎರಡು ಕಡೆ ಬಿರುಕು ಬಿಟ್ಟಿರುವುದು ಗಮನಿಸಿದಾಗ ಕಳಪೆ ಕಾಮಗಾರಿ ಎಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

(ಉ)ಕಾಮಗಾರಿಗೆ ಸಂಬಂಧಿಸಿದಂತೆ ಗೇಟನ್ನು ಅಳವಡಿಸಿರುವುದಿಲ್ಲ, ಕಾರಣ ಕಾಮಗಾರಿ ಅಪೂರ್ಣವಾಗಿರುತ್ತದೆ.

(ಊ) ಅಂದಾಜು ಪಟ್ಟಿಯಲ್ಲಿ ಬೆಟಗೇರಿ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಗೆ ಮತ್ತು ಪೌಢಶಾಲೆಯ ತಡೆಗೋಡೆ ನಿರ್ಮಾಣಕ್ಕೆ 1200 ಜನ ಪರಿಣಿತ ಕೂಲಿಕಾರರಿಗೆ 100 ದಿನಗಳ ಕೂಲಿಯನ್ನು ನೀಡುವುದು, ಶೇ.60% ರಂತೆ ರು.4 ಲಕ್ಷಗಳಿಗೆ ಕೂಲಿಕಾರರಿಗೆ ಕೆಲಸ ನೀಡುವುದು, ಉಳಿದ ಶೇ.40% ರಂತೆ ತೆಗೆದ ಮಣ್ಣನ್ನು ತೆಗೆದು ಹಾಕುವುದು/ಸಿ. ಗಾರೆಯಲ್ಲಿ ಮತ್ತು ಜಂಗಲ್ ತೆಗೆಯಲು ಅಂದಾಜಿನಲ್ಲಿ ಪ್ರಸ್ತಾಪಿಸಿದೆ.

ಆದರೆ, ನೀವು- 1ನೇ ಆ.ಸ. ನೌಕರರು ಸಲ್ಲಿಸಿದ ಆಕ್ಷೇಪಣೆಯಂತೆ ರೂ.3,17,905/- ಪಾವತಿ ಆಗಿರುತ್ತದೆ, ಕಾರಣ ಅಂದಾಜುಪಟ್ಟಿಯಲ್ಲಿ ಅನುಮೋದಿಸಿದಂತೆ ಶೇ.60% ಮತ್ತು ಶೇ.40% ರ ಪ್ರಮಾಣವನ್ನು ನೀವು-1 ಮತ್ತು 2 ನೇ ಆ.ಸ. ನೌಕರರು ಪಾಲನೆ ಮಾಡದೇ ಇರುವುದು ಕಂಡುಬರುತ್ತದೆ. ನಿಮ್ಮಗಳ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೆ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು(ನಡತೆ) 1966, ನಿಯಮ 3(1) (i) ರಿಂದ (iii) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿದ್ದೀರೆಂದು ನಿಮ್ಮಗಳ ಮೇಲೆ ದೋಷರೋಪಣೆಯನ್ನು ಮಾಡಲಾಗಿದೆ."

ವಿಚಾರಣಾಧಿಕಾರಿಗಳು ತಮ್ಮ ವರದಿಯಲ್ಲಿ ಶ್ರೀ ಹನುಮಂತಪ್ಪ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೆಟಗೇರಿ ಗ್ರಾಮ ಪಂಚಾಯಿತಿ, ಕೊಪ್ಪಳ ತಾಲ್ಲೂಕು, ಕೊಪ್ಪಳ ಜಿಲ್ಲೆ ಹಾಗೂ ಶ್ರೀ ಓಂಕಾರ ಮೂರ್ತಿ, ಜೂನಿಯರ್ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ ಕೊಪ್ಪಳ, ಉಪವಿಭಾಗ ಕೊಪ್ಪಳ, ಇವರ ವಿರುದ್ಧದ ಆರೋಪವು ಸಾಬೀತಾಗಿದೆಯೆಂದು ನಿರ್ಣಯಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3) ರಲ್ಲಿ ವಿಚಾರಣಾಧಿಕಾರಿಯವರ ವರದಿಯನ್ನು ಉಪಲೋಕಾಯುಕ್ತರು ಅಂಗೀಕರಿಸಿ ಶ್ರೀ ಹನುಮಂತಪ್ಪ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೆಟಗೇರಿ ಗ್ರಾಮ ಪಂಚಾಯಿತಿ, ಹಾಗೂ ಶ್ರೀ ಓಂಕಾರ ಮೂರ್ತಿ, ಜೂನಿಯರ್ ಇಂಜಿನಿಯರ್, ಬೆಟಗೇರಿ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಅಂದಾಜು ಪಟ್ಟಿಯನ್ವಯ ಕಾಮಗಾರಿಗಳನ್ನು ನಡೆಸದೆ ಕಳಪೆ ಕಾಮಗಾರಿಗಳನ್ನು ನಿರ್ವಹಿಸಿ, ಕೂಲಿ ಮತ್ತು ಕೂಲಿಯೇತರ ವೆಚ್ಚವನ್ನು 60:40 ಅನುಪಾತದಲ್ಲಿ ನಿರ್ವಹಿಸದೆ ಕರ್ತವ್ಯಲೋಪ ಎಸಗಿರುವುದು ಸಾಬೀತಾಗಿರುವುದರಿಂದ ಸದರಿಯವರಿಗೆ ನಾಲ್ಕು ವೇತನ ಮುಂಬಡ್ತಿಯನ್ನು ಸಂಚಿತ ಪರಿಣಾಮದೊಂದಿಗೆ ತಡೆಯಿಡಿಯುವ ದಂಡನೆ ವಿಧಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (4) ರಲ್ಲಿ ಈ ಸಂಬಂಧ ಶ್ರೀ ಹನುಮಂತಪ್ಪ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೆಟಗೇರಿ ಗ್ರಾಮ ಪಂಚಾಯಿತಿ, ಹಾಗೂ ಶ್ರೀ ಓಂಕಾರ ಮೂರ್ತಿ, ಜೂನಿಯರ್ ಇಂಜಿನಿಯರ್, ಇವರಿಗೆ ನಿಯಮಾನುಸಾರ ಸರ್ಕಾರದ ಪತ್ರದಲ್ಲಿ, ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ ಎರಡನೇ ಕಾರಣ ಕೇಳುವ ನೋಟೀಸ್ಸನ್ನು ಜಾರಿಗೊಳಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (5) ರಲ್ಲಿ ಶ್ರೀ ಹನುಮಂತಪ್ಪ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೆಟಗೇರಿ ಗ್ರಾಮ ಪಂಚಾಯಿತಿ, ರವರು ಎರಡನೇ ಕಾರಣ ಕೇಳುವ ನೋಟೀಸ್ಸಿಗೆ ತಮ್ಮ ಲಿಖಿತ ಹೇಳಿಕೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ತಮ್ಮ ಲಿಖಿತ ಹೇಳಿಕೆಯಲ್ಲಿ ಈ ಕೆಳಕಂಡಂತೆ ತಿಳಿಸಿರುತ್ತಾರೆ.

ಸದರಿ ಕಾಮಗಾರಿಯ ವಿಚಾರಣೆಯ ಸಮಯದಲ್ಲಿ ಕೇವಲ ದೂರುದಾರರ ವಾದವನ್ನು ಮಾತ್ರ ಪರಿಗಣಿಸಲಾಗಿದೆ. ಸದರಿ ಕಾಮಗಾರಿಯ ಸಂಬಂಧದ ದೂರು ದುರುದ್ದೇಶ ಪೂರ್ವಕವಾಗಿದೆ. ಇವರ ಪರವಾಗಿ ಸಾಕ್ಷಿ ನೀಡಿದ ಗ್ರಾಮಸ್ಥರ ಮತ್ತು ಗ್ರಾಮ ಪಂಚಾಯತ್ ಅಧ್ಯಕ್ಷರ ಸಾಕ್ಷ್ಯಗಳನ್ನು ಪರಿಗಣಿಸದೆ, ಏಕಪಕ್ಷೀಯ ನಿರ್ಧಾರ ತೆಗೆದುಕೊಳ್ಳಲಾಗಿದೆ. ಸದರಿ ಕಾಮಗಾರಿಯ ಬಿಲ್‌ನ್ನು ಪಾವತಿ ಮಾಡುವ ಮುಂಚೆ ಕಾಮಗಾರಿಯನ್ನು 3 ನೇ ಪಾರ್ಟಿಯಿಂದ ತಪಾಸಣೆಗೊಳಪಡಿಸಿ ದೃಢೀಕರಣ ಪತ್ರ ಪಡೆದು ಬಿಲ್‌ನ್ನು ಪಾವತಿಸಲಾಗಿದೆ. ಸದರಿ ಕಾಮಗಾರಿಯು ದೂರಿಗೆ ಸಂಬಂಧಿಸಿದಂತೆ ಯಾವುದೇ ತಾಂತ್ರಿಕ ಅಧಿಕಾರಿಗಳು ತಪಾಸಣೆ ಮಾಡಿರುವುದಿಲ್ಲ. ಸದರಿ ಕಾಮಗಾರಿಯ ನಿರ್ವಹಣೆಗೆ ಸಂಬಂಧಿಸಿದಂತೆ ಕೂಲಿ ಮತ್ತು ಕೂಲಿಯೇತರ ವೆಚ್ಚವನ್ನು ಶೇ.60:40

ರಂತೆ ಅನುಪಾತ ಕಾಯ್ದುಕೊಂಡಿಲ್ಲ ಎಂಬ ಆರೋಪಕ್ಕೆ ಸದರಿ ಗ್ರಾಮ ಪಂಚಾಯಿತಿಗೆ ಸಂಬಂಧಿಸಿದ 2012-13 ನೇ ಸಾಲಿನ ಎಲ್ಲಾ ಕಾಮಗಾರಿಗಳ ಒಟ್ಟಾರೆ ನಿರ್ವಹಣೆಯಲ್ಲಿ ಕೂಲಿ ಮತ್ತು ಕೂಲಿಯೇತರ ವೆಚ್ಚವನ್ನು ಶೇ. 60:40 ರಂತೆ ಅನುಪಾತ ಕಾಯ್ದುಕೊಳ್ಳಲಾಗಿದೆ. ಆದ್ದರಿಂದ ಈ ಕಾಮಗಾರಿಯ ಸಂಬಂಧದ ತೀರ್ಪು ಏಕಪಕ್ಷೀಯವಾಗಿದ್ದು, ಸದರಿ ಆರೋಪಗಳನ್ನು ಸಾರಾಸಗಟಾಗಿ ನಿರಾಕರಿಸಿ ಸದರಿ ಆರೋಪಗಳಿಂದ ಮುಕ್ತಗೊಳಿಸುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (6) ರಲ್ಲಿ ಶ್ರೀ ಓಂಕಾರ ಮೂರ್ತಿ, ಜೂನಿಯರ್ ಇಂಜಿನಿಯರ್, ರವರು ಎರಡನೇ ಕಾರಣ ಕೇಳುವ ನೋಟೀಸ್ಸಿಗೆ ತಮ್ಮ ಲಿಖಿತ ಹೇಳಿಕೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ತಮ್ಮ ಲಿಖಿತ ಹೇಳಿಕೆಯಲ್ಲಿ ಈ ಕೆಳಕಂಡಂತೆ ತಿಳಿಸಿರುತ್ತಾರೆ.

ಸದರಿ ಕಾಮಗಾರಿಯ ವಿಚಾರಣೆಯ ಸಮಯದಲ್ಲಿ ಕೇವಲ ದೂರುದಾರರ ವಾದವನ್ನು ಮಾತ್ರ ಪರಿಗಣಿಸಲಾಗಿದೆ. ಸದರಿ ಕಾಮಗಾರಿಯ ಸಂಬಂಧದ ದೂರು ದುರುದ್ದೇಶ ಪೂರ್ವಕವಾಗಿದೆ. ಇವರ ಪರವಾಗಿ ಸಾಕ್ಷಿ ನೀಡಿದ ಗ್ರಾಮಸ್ಥರ ಮತ್ತು ಗ್ರಾಮಪಂಚಾಯತ್ ಅಧ್ಯಕ್ಷರ ಸಾಕ್ಷ್ಯಗಳನ್ನು ಪರಿಗಣಿಸದೆ, ಏಕಪಕ್ಷೀಯ ನಿರ್ಧಾರ ತೆಗೆದುಕೊಳ್ಳಲಾಗಿದೆ. ಸದರಿ ಕಾಮಗಾರಿಯ ದೂರಿಗೆ ಸಂಬಂಧಿಸಿದಂತೆ ಯಾವುದೇ ತಾಂತ್ರಿಕ ಅಧಿಕಾರಿಗಳು ತಪಾಸಣೆ ಮಾಡಿರುವುದಿಲ್ಲ. ಅಂದಾಜು ಪಟ್ಟಿಯಲ್ಲಿನ ಅಳತೆಗಳಿಗಿಂತ ಹೆಚ್ಚಿನ ಕಾಮಗಾರಿಯು ನಿರ್ವಾಹಿಸಿರುವುದು ಮತ್ತು ಕಾಮಗಾರಿಯ ಭದ್ರತೆಯ ದೃಷ್ಟಿಯಿಂದ ಅಂದಾಜು ಪಟ್ಟಿಯಲ್ಲಿ ಆರ್.ಸಿ.ಸಿ ಕಾಮಗಾರಿಗೆ ಕಬ್ಬಿಣದ ಸರಳುಗಳ ಅಂಶವನ್ನು ಅಳವಡಿಸದೆ ಇದ್ದರೂ ಕೂಡ ಸ್ಥಳದಲ್ಲಿ ಕಾಮಗಾರಿಯ ನಿರ್ವಹಣೆ ಸಂದರ್ಭದಲ್ಲಿ ಕಬ್ಬಿಣದ ಸರಳುಗಳನ್ನು ಹಾಕಿ ಕಾಮಗಾರಿಯನ್ನು ನಿರ್ವಹಿಸಿದ್ದರೂ ಕೂಡಾ ಆ ಹೇಳಿಕೆಯನ್ನು ಪರಿಗಣಿಸದೇ ಇರುವುದು ವಿಷಾದನೀಯ. ಆದ್ದರಿಂದ ಈ ಕಾಮಗಾರಿಯ ಸಂಬಂಧದ ತೀರ್ಪು ಏಕಪಕ್ಷೀಯವಾಗಿದ್ದು, ಸದರಿ ಆರೋಪಗಳನ್ನು ಸಾರಾಸಗಟಾಗಿ ನಿರಾಕರಿಸಿ ಸದರಿ ಆರೋಪಗಳಿಂದ ಮುಕ್ತಗೊಳಿಸುವಂತೆ ಕೋರಿರುತ್ತಾರೆ.

ಸದರಿ ಆಪಾದಿತರ ಲಿಖಿತ ಹೇಳಿಕೆಯನ್ನು ಪರಿಶೀಲಿಸಲಾಗಿದ್ದು, ಸದರಿಯವರ ಹೇಳಿಕೆಯನ್ನು ಒಪ್ಪಲು ಬರುವುದಿಲ್ಲ, ಕಾರಣ ವಿಚಾರಣಾಧಿಕಾರಿಯವರ ವರದಿಯನ್ನು ಪರಿಶೀಲಿಸಲಾಗಿ ವಿಚಾರಣಾಧಿಕಾರಿಯವರು ತಮ್ಮ ನಿರ್ಣಯ ಹಾಗೂ ವರದಿಯನ್ನು ದಾಖಲಿಸಿದ್ದು ಅದರ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತಿದೆ.

In Cross Examination DW1 to 4 have deposed that RCC pillars were constructed to compound wall. The provision was provided in estimates to construct the pillars. They have denied that no provision was provided in the estimate for RCC pillars. They have further deposed that gate is not fixed. They have denied that the work was not carried out as per the estimate. They have denied that the work was substandard therefore the cracks occurred. They have denied that 60:40 ratio was not followed by the DGO's while executing the work. They have denied that to help DGO's they have deposed falsely.

DW-2 has deposed in the cross examination that due to floods the cracks were occurred in the compound wall. DW-3 & 4 have deposed that a tractor came in contact wih the compound wall therefore one crack occurred. But, in the comments submitted by DGO-2 in Ex.P-5 he has taken a contention that during the year 2013-14 due to heavy rains cracks were occurred in two places. This contention taken by DGO's is contradicting. Therefore this reason offered by DGO's cannot be accepted.

In the estimate Ex.P-4 no provision is provided for construction of RCC pillars were constructed. According to the estimate 60:40 retio has to be followed but the same is not followed by DGO-1 & 2 while executing the work. Gate was not fixed. According to DGO 1 & 2 instead of fixing the gate extra length of compound wall was constructed.

Therefore it is very clear that as per estimate length of the compound wall is not considered, work was not executed, though there is no provision without permission

RCC pillars were constructed, cracks occurred in the compound wall therefore, the construction work is substandard. The gate was not fixed, 60:40 ratio is not followed as stated in the extimate. Thereby DGO's being/government servants have failed maintain absolute integrity and devotion to duty and committed an act which is unbecoming of Government servants.

ವಿಚಾರಣಾಧಿಕಾರಿಯವರು ವಿವರವಾದ ಸಮರ್ಥನೆಯೊಂದಿಗೆ ಆರೋಪವನ್ನು ಸಾಬೀತುಪಡಿಸಿರುತ್ತಾರೆ. ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತರು ಅಂಗೀಕರಿಸಿ ಈ ಕೆಳಕಂಡಂತೆ ಶಿಫಾರಸ್ಸು ಮಾಡಿರುತ್ತಾರೆ.

Having regard to the nature of charges proved against DGO-1 Sri Hanumanthappa and DGO-2 Sri Omkarmurthy, It is hereby recommended to the Government to impose penalty of withholding 4 annual increments payable to DGO-1 Sri Hanumanthappa and DGO-2 Sri Omkarmurthy, with cumulative effect.

ಸರ್ಕಾರವು ಸದರಿ ಪ್ರಕರಣದಲ್ಲಿ ಶ್ರೀ ಹನುಮಂತಪ್ಪ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೆಟಗೇರಿ ಗ್ರಾಮ ಪಂಚಾಯಿತಿ, ಹಾಗೂ ಶ್ರೀ ಓಂಕಾರ ಮೂರ್ತಿ, ಜೂನಿಯರ್ ಇಂಜಿನಿಯರ್, ಇವರು 2ನೇ ಕಾರಣ ಕೇಳುವ ನೋಟೀಸ್ಸಿಗೆ ಸಲ್ಲಿಸಿರುವ ಲಿಖಿತ ಹೇಳಿಕೆ, ನಿಬಂಧಕರು, ಕರ್ನಾಟಕ ಲೋಕಾಯುಕ್ತ ಇವರು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿದ ವಿಚಾರಣಾ ವರದಿ, ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ ಇವರ ಶಿಫಾರಸ್ಸು ಹಾಗೂ ದಾಖಲೆಗಳು ಮತ್ತು ಸಾಕ್ಷ್ಯಾಧಾರಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಆಪಾದಿತರು 2ನೇ ಕಾರಣ ಕೇಳುವ ನೋಟೀಸ್ಸಿಗೆ ಸಲ್ಲಿಸಿರುವ ಲಿಖಿತ ಹೇಳಿಕೆ ಸಮರ್ಥನೀಯವಲ್ಲವೆಂದು ಕಂಡುಬಂದಿರುವುದರಿಂದ, ಮಾನ್ಯ ಉಪಲೋಕಾಯುಕ್ತರು ಶಿಫಾರಸ್ಸು ಮಾಡಿರುವಂತೆ ಶ್ರೀ ಹನುಮಂತಪ್ಪ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೆಟಗೇರಿ ಗ್ರಾಮ ಪಂಚಾಯಿತಿ, ಹಾಗೂ ಶ್ರೀ ಓಂಕಾರ ಮೂರ್ತಿ, ಜೂನಿಯರ್ ಇಂಜಿನಿಯರ್ ಇವರಿಗೆ ನಾಲ್ಕು ವೇತನ ಮುಂಬಡ್ತಿಯನ್ನು ಸಂಚಿತ ಪರಿಣಾಮದೊಂದಿಗೆ ತಡೆಯಿಡಿಯುವ ದಂಡನೆ ವಿಧಿಸಲು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:397:ಗ್ರಾಪಂಕಾ:2017 ಬೆಂಗಳೂರು, ದಿನಾಂಕ-28-10-2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು, ಶ್ರೀ ಹನುಮಂತಪ್ಪ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೆಟಗೇರಿ ಗ್ರಾಮ ಪಂಚಾಯಿತಿ, ಹಾಗೂ ಶ್ರೀ ಓಂಕಾರ ಮೂರ್ತಿ, ಜೂನಿಯರ್ ಇಂಜಿನಿಯರ್, ಬೆಟಗೇರಿ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಅಂದಾಜು ಪಟ್ಟಿಯನ್ವಯ ಕಾಮಗಾರಿಗಳನ್ನು ನಡೆಸದೆ ಕಳಪೆ ಕಾಮಗಾರಿಗಳನ್ನು ನಿರ್ವಹಿಸಿ, ಕೂಲಿ ಮತ್ತು ಕೂಲಿಯೇತರ ವೆಚ್ಚವನ್ನು 60:40 ಅನುಪಾತದಲ್ಲಿ ನಿರ್ವಹಿಸದೆ ಕರ್ತವ್ಯಲೋಪ ಎಸಗಿರುವುದು ಸಾಬೀತಾಗಿರುವುದರಿಂದ ಸದರಿಯವರಿಗೆ ನಾಲ್ಕು ವೇತನ ಮುಂಬಡ್ತಿಯನ್ನು ಸಂಚಿತ ಪರಿಣಾಮದೊಂದಿಗೆ ತಡೆಯಿಡಿಯುವ ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಕೊಪ್ಪಳ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಕೊಪ್ಪಳ ತಾಲ್ಲೂಕು, ಕೊಪ್ಪಳ ಜಿಲ್ಲೆ.
6. ಶ್ರೀ ಹನುಮಂತಪ್ಪ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೆಟಗೇರಿ ಗ್ರಾಮ ಪಂಚಾಯಿತಿ, ಕೊಪ್ಪಳ ತಾಲ್ಲೂಕು, ಕೊಪ್ಪಳ ಜಿಲ್ಲೆ.
7. ಶ್ರೀ ಓಂಕಾರ ಮೂರ್ತಿ, ಜೂನಿಯರ್ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಕೊಪ್ಪಳ ತಾಲ್ಲೂಕು, ಕೊಪ್ಪಳ ಜಿಲ್ಲೆ.
8. ಗಣಕ ಕೋಶ.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.